doc-536
T-P-2

ಗೋರಕ್ಷಣ
GORAKSHANA

Protect the Cow ಗೋಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು

Advertise in Goraksana and help the pious cause

ವಿಳಾಸ: ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

9 ನೇ ವರ್ಷ — 1959 ನೇ ಮೇ ತಾ || 30 · May 59

ಅಮೇರಿಕಾದಲ್ಲಿ ಮೈಸೂರಿನ ಗವರ್ನರ್‌ರವರು

[ಅಮೇರಿಕಾ ವಿಶ್ವವಿದ್ಯಾನಿಲಯಗಳ ಆಹ್ವಾನದ ಮೇಲೆ ಅಲ್ಲಿ, ಭಾರತ ತತ್ವಶಾಸ್ತ್ರದ ಬಗ್ಗೆ ಭಾಷಣಮಾಡಲು ಮೈಸೂರಿನ ಗವರ್ನರಾಗಿದ್ದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರರು ಅಲ್ಲಿ ಪ್ರವಾಸ ಮಾಡಿಸುತ್ತಿರುವ ವಿಷಯವಿದು ಮೈಸೂರಿನ ರಾಜಮನೆತನಕ್ಕೂ ಶ್ರೀಮನ್ಮಹಾರಾಜರವರಿಗೂ ಗೋರಕ್ಷಣ ಬಗ್ಗೆ ಅಪಾರ ಮಮತೆ, ಉತ್ಸಾಹ, ಕರ್ತವ್ಯ ನಿಷ್ಠೆ ಇರುವುದರಿಂದ, "ಗೋರಕ್ಷಣ" ದಲ್ಲಿ ಅದನ್ನು ಅತ್ಯಂತ ಸಂತೋಷದಿಂದ ಪ್ರಕಟಿಸಿದ್ದೇನೆ]

(ಹಿಂದಿನ ಪುಟ ನೋಡಿ)

ಗೋಪಾಲನೆ

ಪರಿಪುಷ್ಟವಾದ ಆಕಳುಗಳು ಹೆಚ್ಚು ಹಾಲು ಕೊಡುವುವು : ಆ ಹಾಲಿನ ಉಪಯೋಗದಿಂದ ಕುಟುಂಬವು ಆರೋಗ್ಯದಲ್ಲಿಯೂ ಸುಧಾರಿಸುವುದು, ಆರ್ಥಿಕ ಸ್ಥಿತಿಯೂ ಹೆಚ್ಚುವುದು. ಮನೆಮಂದಿಯೆಲ್ಲಾ ಆರೋಗ್ಯವಂತರಾದಾಗ ಹೊಲಗದ್ದೆಗಳ ಕೃಷಿಗೂ ಶಕ್ತಿಯುಂಟಾಗುವುದು ; ಬಲವಂತ ಎತ್ತುಗಳಿದ್ದರೆ ಸರಿಯಾದ ಕಾಲಕ್ಕೆ ಬೀಸಾಯವೂ ಸಾಗಿ ಲಾಭವು ಹೆಚ್ಚು ಬರುವುದು. ಹೀಗೆ ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸಲಿಕ್ಕೂ, ಆಹಾರ ಸಮಸ್ಯೆ ಇಲ್ಲದಂತೆ ಮಾಡುವುದಕ್ಕೂ ಗೋಪಾಲನೆಯು ವೃದ್ಧಿ ಮತ್ತು ಸುಧಾರಣೆಗಳೇ ಆಗಬೇಕಾದ ಮೊದಲನೇ ಕೆಲಸವು ನಾವು ಸಾಕಿದಷ್ಟೂ ಗೋವುಗಳು ತಮ್ಮ ಉತ್ಪತ್ತಿಯ ಮೂಲಕವಾಗಿ ನಮ್ಮನ್ನು ಸಾಕುವವು. ಹಿಂದಿನ ಕಾಲದಲ್ಲಿ ಋಷ್ಯಾಶ್ರಮಗಳಲ್ಲಿ ಸಾವಿರ ಗಟ್ಟಲೆ ಮಕ್ಕಳು ವಿದ್ಯೆ ಹೊಂದುತ್ತಿದ್ದಾಗ ಅವರಿಗೆ ಬೇಕಾದಷ್ಟು ಹಾಲು ಕುಡಿಯಲು ಆ ಆಶ್ರಮಗಳಲ್ಲಿರುವ ದನಗಳಿಂದ ಸಾಧ್ಯವಾಗುತ್ತಿತ್ತು ; ಅಲ್ಲಿಯ ದನಗಳು ಉತ್ತಮ ತಳದವಗಳಾಗಿದ್ದು ಅವಕ್ಕೆ ಬೇಕಾದ ಹುಲ್ಲು ಚಿಗುರುಗಳು ಅಲ್ಲಿ ಧಾರಾಳವಾಗಿ ಸಿಗುವಂತಿದ್ದಿತು ; ಅವು ಕೊಡ ಕೊಡ ಹಾಲು ಕೊಡುತ್ತಿದ್ದವು ಅಲ್ಲಿ ವಾಸಮಾಡುವವರೆಲ್ಲರೂ ಕುತ್ತಿ ಕುತ್ತಿ ಹಾಲು ಕುಡಿದು ಹಣ್ಣುಗಳನ್ನು ತಿನ್ನುತ್ತಿದ್ದರು ; ಹಾಗೆ ಹಾಲು ಕುಡಿಯುವವರಿಗೆ ಅನ್ನವೂ ಕಡಮೆ ಸಾಕು : ಹಣ್ಣುಹಂಪಲಿಗೆ ಬ್ರಹ್ಮದಲ್ಲಿ ಕಡಮೆಯೇ ಇದ್ದಿಲ್ಲ ; ಇಡೀ ವರ್ಷವೂ ಒಂದಲ್ಲ ಒಂದು ಜಾತಿಯ ಫಲಗಳು ದೊರೆಯುವಂತೆ ಅಲ್ಲಿ ವಿವಿಧ ಜಾತಿಯ ವೃಕ್ಷಗಳು ನೆಡಲ್ಪಡುತ್ತಿದ್ದವು ಈಗಿನ ಜೋರ್ಡಿಂಗುಗಳಂತೆ ಹೆಚ್ಚು ಖರ್ಚು ದೂಡಿಯೂ ಅಸೌಖ್ಯ ಉಂಟಾಗಲು ಆಗ ಎಡೆ ಇದ್ದಿಲ್ಲ. ಎಲ್ಲರೂ ಬಲವಂತರೇ ಆಗಿದ್ದರು. ಈಗಿನ ಕಾಲದಲ್ಲಿ ಸಾಕಷ್ಟು ಹಾಲಿಲ್ಲದುದರಿಂದ ಮನುಷ್ಯರು ಪುಷ್ಟಿಯಾಗಿರುವುದು ಕಷ್ಟ. ದೇಹದಲ್ಲಿ ಕೊಬ್ಬು ಕೆಡಮೆಯಾದಂತೆ ತಿನ್ನುವುದು ಗೋವುಗಳಿದ್ದು ಅವುಗಳ ಉತ್ಪತ್ತಿಯೂ ವೃದ್ಧಿಹೊಂದಿರುವುದೋ ಅಲ್ಲಿ ಬಡತನ ಅನಾರೋಗ್ಯ ಮುಂತಾದ ಕಷ್ಟಗಳು ಬರುವುದಿಲ್ಲ. ಇಂದಿನ ಭೂಸ್ವರ್ಗವೆನ್ನಲು ಯೋಗ್ಯವಾದ ಉತ್ತರ ಅಮೇರಿಕ ಇದಕ್ಕೆ ನಿದರ್ಶನವಾಗಿದೆ. ಅಲ್ಲಿಯು ವಿಸ್ತಾರವಾದ ನದಿವಳ ದಂಡೆಗಳಲ್ಲಿ ವಿಶಾಲವಾದ ಬಯಲು ಪ್ರದೇಶವು ಹಬ್ಬಿಕೊಂಡಿದೆ ; ಹುಲ್ಲಿಗೆ ಕೊರತೆ ಇಲ್ಲ : ಅಲ್ಲಿ ಗೋವುಗಳ ಸಂಖ್ಯೆ ಅಧಿಕವಾಗಿ ಹೆಚ್ಚುತ್ತಿದೆ ; ಅಲ್ಲಿ ದನಗಳನ್ನು ಕೈಯಿಂದ ಹಾಲು ಕರೆದು ತೀರದಾದುನರಿಂದ ಯಂತ್ರದ ಸಹಾಯದಿಂದ ಕರೆಯುತ್ತಾರೆ. ಅಮೇರಿಕಾದ ಅಭಿವೃದ್ಧಿಗೆ ಅಲ್ಲಿಯ ಎವುಲ ಗೋವುಗಳು ಕಾರಣವೆಂದು ಹೇಳಲೇನೂ ಅಡ್ಡಿಯಿಲ್ಲ.

ಪೌಷ್ಟಿಕ ಆಹಾರ ಅಗತ್ಯ

ಪೌಷ್ಟಿಕ ವಸ್ತುಗಳ ಅಭಾವದಿಂದ ಸುದೃಢವಾದ ಪಶುಪ್ರಾಣಿಗಳ ಸಂರಕ್ಷಣೆಗೆ ನೆಂವಾಗದ ಭೂಮಿ ಮತ್ತು ಪಶುಪ್ರಾಣಿಗಳು ಹಲ್ಲುಗಾವಲುಗಳಲ್ಲಿ ಎತಿಎಷ್ಟೂ ಮೇವನ್ನು ತಿನ್ನುವುದರಿಂದ ಭೂಸವೆತಕ್ಕೆ ಅವಕಾಶವುಂಟಾಗಿ ಮಣ್ಣಿನ ಸಾರಕ್ಕೆ ಧಕ್ಕೆಯುಂಟಾಗುವದು ಈ ಅನ್ಯೋನ್ಯಾಶ್ರಯ ದೋಷ ನಿವಾರಿಸಬೇಕು ಹಾಗೂ ಈ ಸಮಸ್ಯೆಯು ಮಾನವನ ಆಹಾರ ಹಾಗೂ ಪಶ್ಯಕ ಪ್ರಾಣಿಗಳ ಮೇಲಿನ ಉತ್ಪಾದನೆಗೆ ತುರ್ತಿನ ಅಗತ್ಯತೆ ಅಗಿದೆ ಎಂದು ವ್ಯವಸಾಯ ಸಚಿವ ಶಾಖೆಯ ಉಪ ಸಚಿವರಾದ ಶ್ರೀ ಎಂ ವಿ ಕೃಷ್ಣಪ್ಪನವರು ತಿಳಿಸಿದ್ದಾರೆ

ಇಂದು ಮಾನವರು ಹಾಗೂ ಪಶುಪ್ರಾಣಿಗಳು ಸೇವಿಸುವ ಆಹಾರದ ವಿಷಯದಲ್ಲಿ ಅಭಾವದಿಂದ ಕೂಡಿದೆ ಎಂದು ಅದಂಲ್ಲಿಯೂ ಪಶುಪ್ರಾಣಿಗಳಿಗೆ ಅಗತ್ಯವಾದ ಮೇವಿನ ಕೊರತೆಯು ಚಿಂತಾಜನಕವಾಗಿದೆಯೆಂದು ಅವರು ನುಡಿದರು

ಲಂಡನ್ನಿನಲ್ಲಿರುವ ರಷ್ಯ ರಾಯಭಾರ ಕಚೇರಿಯ ಅಧಿಕಾರಿಯೋರ್ವರು ಬ್ರಿಟನ್ನಿನಲ್ಲಿ ರಾಜಕೀಯ ಆಶ್ರಯವನ್ನು ಬೇಡಿದ್ದಾರೆ

ರಷ್ಯ [illegible]ವಾಗಿ ಪ್ಲಾಸ್ಟಿಕ್ ಹ[illegible]ರಿಸಿದೆ

ಜಾನುವಾರು ಸಂಶೋಧನಾ ನಿಲ್ದಾಣ

ಒಂದು ಕೋಟಿ ರೂ ಗಳ ಅಂದಾಜಿನ ಬಿಹಾರು ಸರ್ಕಾರಿ ಜಾನುವಾರು ಸಂಶೋಧನ ಸ್ಟೇಷನ್ನಿನ ಪ್ರಾರಂಭೋತ್ಸವವನ್ನು ರಾಜ್ಯದ ಮುಖ್ಯ ಮಂತ್ರಿಗಳು ನೆರವೇರಿಸಿದರು ಈ ತಿಂಗಳು 1 ನೆಯ ತಾ|| ಇದು ಪಾಟ್ನಾದಲ್ಲಿ ನಡೆಯಿತು.

ಪ್ರಾಣಿಸಂಖ್ಯೆ ಏರಿದೆ

ಮಾಸ್ಕೋ ಏ 25— 1958 ರ ಏಪ್ರಿಲ್ ದಿನಾಂಕ 1 ರಿಂದ ಈ ವರ್ಷ ಏಪ್ರಿಲ್ ದಿನಾಂಕ 1 ರವರೆಗಿನ ಕಾಲಾವಧಿಯಲ್ಲಿ 47 ಲಕ್ಷದಷ್ಟು ದೊಡ್ಡ ಕೊಂಬಿನ ಪ್ರಾಣಿಸಂಖ್ಯೆಯು ಹೆಚ್ಚಿ ಈಗ 4.6 ಕೋಟಿಯವರೆಗೇರಿದೆ, ಎಂದು ಸೋವಿಯತ್ ನಾಡಿನ ಮಂತ್ರಿಮಂಡಲದ ಕೇಂದ್ರೀಯ ಅಂಕಿ-ಅಂಶ ಮಂಡಲವು ವರದಿ ಮಾಡಿದೆ.

— × —

ಗೋವ. ಡಯು ಡಾಮನುಗಳಲ್ಲಿ ಒಳಾಡಳಿತ ಸ್ವಾತಂತ್ರ್ಯ ಕೊಡಲು ಪೋರ್ಚುಗೀಸು ಸರ್ಕಾರ ಪರ್ಯಾಲೋಚಿಸುತ್ತಿದೆ ಎಂದು ವರದಿ

ಡೆಸ್ವರ್ ಮೇ 25—ಮೈಸೂರಿನ ರಾಜ್ಯಪಾಲರು ಏಪ್ರಿಲ್ 18 ರಂದು ಏಳು ವಾರಗಳ ಅಮೇರಿಕಾ ಸಂದರ್ಶನ ಏರ್ಪಡಿಸಿದರು; ಈ ಸಂಚಾರದ ಅಂಗವಾಗಿ ಅವರು ಭಾನುವಾರ ಸಾಲ್ಟ್‌ಲೇಕ್ ನಗರದಿಂದ ಇಲ್ಲಿಗೆ ಆಗಮಿಸಿದರು.

'ಅಮೇರಿಕವೆಂದರೆ ಜೆಟ್' ವಿಮಾನಗಳು ಮತ್ತು ಅದ್ಭುತ ಭೌತಿಕ ಪ್ರಗತಿ ಎಂದು ನಾನು ಭಾವಿಸುವುದಿಲ್ಲ; ಆಧ್ಯಾತ್ಮಿಕ ಮೌಲ್ಯಗಳನ್ನು ಅನುಸರಿಸುತ್ತಿರುವ ಮತ್ತು ಸತ್ಯಾನ್ವೇಷಣೆ ಮಾಡುತ್ತಿರುವ ಒಬ್ಬರಿಂದ ದೇಶ ಎಂದು ಸದಾ ನಾನು ಪರಿಗಣಿಸುತ್ತೇನೆ' ಎಂದು ರಾಜ್ಯಪಾಲರು ತಾವಿದ್ದ ಹೋಟೆಲಿನಲ್ಲಿ ಏರ್ಪಟ್ಟ ಸಂದರ್ಶನದಲ್ಲಿ ನುಡಿದರು. ಅಮೇರಿಕಾದಲ್ಲಿ ಜೀವನವನ್ನಿಟ್ಟವು ಬಹಳ ಉನ್ನತವಾಗಿದ್ದು ಊಹೆಗೆ ಮೀರಿದುದಾಗಿರುತ್ತದೆ; ಇದು ಅಭಿನಂದನೀಯವಾದ ಸಂಗತಿಯೂ: ಆದರೆ ಇನ್ನೂ ಹೆಚ್ಚಿನ ಸ್ವಾರಸ್ಯದ ವಿಷಯವೆಂದರೆ, — — ಕೇವಲ ವಿಶ್ವವಿದ್ಯಾಲಯದ ಜನರಲ್ಲಷ್ಟೇ ಅಲ್ಲ, ಸಾಮಾನ್ಯ ಪ್ರಜೆಯಲ್ಲೂ ಮೌಲ್ಯಗಳ ಅನ್ವೇಷಣೆಯ ಹಂಬಲವಿದ್ದುದು ನನಗೆ ಕಂಡುಬಂತು, ಎಂದವರು ನುಡಿದರು. ಅಮೇರಿಕನ್ನರು ಸತ್ಯಾನ್ವೇಷಣೆ ಮಾಡುತ್ತಿರುವುದನ್ನು ಮತ್ತು ಕೇವಲ ಶಿಷ್ಟಾಚಾರಕ್ಕೆ ಪಾತ್ರವೇ ಅಲ್ಲದೆ ನಿಜವಾದ ಆಸಕ್ತಿಯಿಂದ ವ್ಯಾಚೀನ ಸಂಸ್ಕೃತಿ ಮತ್ತು ವಿಚಾರ ಧಾರೆಯಲ್ಲಿ ಕುತೂಹಲ ತೋರಿಸಿದ ದನ್ನು ನೋಡಿ ನನ್ನ ಜೀವಮಾನದಲ್ಲೇ ಇದೊಂದು ಅಪೂರ್ವ ಅನುಭವ ಎಂದು ನನಗನಿಸಿತು, ಎಂದವರು ಹೇಳಿದರು.

ಇವರು ಅನೇಕ ವಿಶ್ವವಿದ್ಯಾನಿಲಯಗಳ ಆಮಂತ್ರಣಗಳ ಮೇರೆಗೆ, ಭಾರತೀಯ ತತ್ವಶಾಸ್ತ್ರದ ಕುರಿತು ಭಾಷಣಮಾಡಲು ಅಮೇರಿಕಾಕ್ಕೆ ಬಂದಿದ್ದಾರೆ. ಕೊಲಂಬಾಡಾದಲ್ಲಿ ಮೈಸೂರಿನ ರಾಜ್ಯಪಾಲರಿಗೆ ಅಧಿಕೃತ ಸ್ವಾಗತ ನೀಡಲಾಯಿತು; ಸ್ವಾಗತ ನೀಡಿದ ಗುಂಪಿನಲ್ಲಿ ಅಮೇರಿಕಾ ವಾಣಿಜ್ಯ ಇಲಾಖೆಯ ಪರಿವಾರ ಭಾರತ ಸಂಚಾರ ಮಾಡಿದಾಗ ಮೈಸೂರಿನಲ್ಲಿ ಒಡೆಯರನ್ನು ಭೇಟಿಮಾಡಿದ್ದ ಮೇಕ್ಲಿಬರ್ಗರೂ ಮತ್ತು ಭಾರತ ರಾಯಭಾರಿಯಾಗಿರುವ ಎಲ್ಸ್ ವರ್ತ್‌ಬಕರವರ ಭಾವ ಅಂಡ್ರೂ ಬಟ್ಲರರೂ ಇದ್ದರು. ಮಹಾರಾಜರವರ ಸಂಚಾರದ ಕೊನೆಯವರೆಗೆ ಅವರ ಜೊತೆಯಲ್ಲಿ ಇವರು ಇದ್ದರು.

ಗ್ರೇಟ್ ವೆಸ್ಟರ್ನ್ ಷುಗರ್ ಕಂಪೆನಿಯ ಅಧ್ಯಕ್ಷ ಕೆಂಪರು, ಭಾರತೀಯ ಅಧಿಕಾರಿಯು ಈ ಕೊಲರಾಡೋ ಸಂದರ್ಶನವನ್ನು 'ಒಂದು ಗೌರವ ಮತ್ತು ಸಂತಸ' ಎಂದು ವರ್ಣಿಸಿದರು ಮತ್ತು ಅವರಲ್ಲಿ ಗಳಿಸುವ ವ್ಯಕ್ತಿಪರಿಚಯಗಳು ಭಾರತದೊಡನೆ ಇನ್ನೂ ಶಾಶ್ವತವಾದ ಮೈತ್ರಿಯನ್ನು ರೂಪಿಸಲು ಸಾಧಕವಾಗುವುವು ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಕೊಲರಾಡೋ ಗೌರ್ನರರು ಇಂದು ಮೈಸೂರಿನ ರಾಜ್ಯಪಾಲರಿಗೆ ಮತ್ತು ಅವರ ಪರಿವಾರದವರಿಗೆ ವಿರ್‌ಫ್ಲೋಸ್ಸ್ ಅರಣ್ಯಮಿಯನ್ನು ಸಂದರ್ಶಿಸಲು ಸುಮಾರು 70 ಮೈಲಿಗಳ ಸಂಚಾರಕ್ಕಾಗಿ ಕಾರುಗಳನ್ನು ಒದಗಿಸಿಕೊಡುವರು; ನಂತರ ಹೂಸ್ಟನ್, ಟೆಕ್ಸಾಸ್, ಮೆಕ್ಸಿಕೋಗಳಿಗೆ ಹೋಗುವರು — ಅಮೇರಿಕಾ ಸಂದರ್ಶನಗಳ ಅದಿಯಲ್ಲಿ ಅವರು ರಾಜಧಾನಿ ವಾಷಿಂಗ್ಟನ್ನಿಗೆ ಬರುವರು.

ನ್ಯೂಯಾರ್ಕ್‌ನಗರ, ಬಾಸ್ಟನ್, ಮಿನಿಯಾಪೋಲಿಸ್‌ಗಳಲ್ಲಿ ಮತ್ತು ಯೇಲ್ ಗಳಂತಹ ಪ್ರಮುಖ ವಿಶ್ವವಿದ್ಯಾನಿಲಯಗಳಲ್ಲಿ ಭಾಷಣಮಾಡಿದುದಷ್ಟೇ ಅಲ್ಲದೆ. ಗೌರ್ನರರು ಬಿಡುವಿನಲ್ಲಿ ಪಿಟ್ಸ್‌ಬರ್ಗ್ ಉಕ್ಕಿನ ಕೈಗಾರಿಕೆಯಲ್ಲಿ ತರಬೇತಿ ಪಡೆಯುತ್ತಿರುವ ಭಾರತೀಯ ಎಂಜಿನಿಯರನ್ನೂ ಸಂದರ್ಶಿಸಿದ್ದಾರೆ ಅವರು ಸಂಗೀತ ಕಚೇರಿಗಳನ್ನು ನೋಡಲು ಅವಕಾಶ ಮಾಡಿಕೊಂಡಿದ್ದಾರೆ, ಅಮೇರಿಕಗಳ ನಡುವೆ ಸಂಗೀತ ಮತ್ತು ಕಲೆಯ ವಿನಿಮಯಗಳು ಪಾಸ್ಪಂ ತಿಳಿವಳಿಕೆಯ ಸಂವರ್ಧನೆಗೆ ಒಳ್ಳೆಯದು ಎಂದವರು ಹೇಳಿದರು.

ಗವರ್ನರರು ಮಿನಿಯಾ ಪೋಲೀಸ್‌ನಲ್ಲಿ ತಮ್ಮ ಭಾಷಣದ ಅನುಭವದ ಬಗೆಗೆ ಉಲ್ಲಾಸದಿಂದ ಮಾತನಾಡಿದರು ಅಲಿಕಲ್ಲುಗಳ ಬಿರುಗಾಳಿ ಮಳೆಯಿದ್ದರೂ ಭಾಷಣ ಭವನದಲ್ಲಿ ಜನರು ಕಿಕ್ಕಿರಿದಿದ್ದರು ಅನಂತರ 'ಭಾರತದ ಶಾಂತಿ ಅನ್ವೇಷಣೆ' ಎಂಬ ಹೆಸರಿನ ಅವರ ಭಾಷಣದ 10 ಸಾವಿರ ಪ್ರತಿಗಳು ಮುದ್ರಿತವಾಗಿ ಹಂಚಲ್ಪಟ್ಟವು.

ಇವರು ನ್ಯೂಯಾರ್ಕಿನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಎಥಿಕ್ಸ್ (ಯಹೂದಿ ಥಿಯಾಲಾಜಿಕಲ್ ಸೆಮಿನರಿಯ ಅಂಗ) ನಲ್ಲಿ ತಮ್ಮ ಪ್ರಾರಂಭದ ಭಾಷಣವನ್ನು ಮಾಡಿದರು ಈ ಭಾಷಣದಲ್ಲಿ ಭಾರತೀಯ ವಿಚಾರದಲ್ಲಿ ಅಧಿಕಾರದ ಕಲ್ಪನೆಯನ್ನು ಕುರಿತು ಮಾತನಾಡಿದರು.

ಗೋಂಕ್ಷಣ್, ಪ್ರಾಣದಯಾ ಕಾರ್ಯಗಳು ಜೆಬ್ಬೆ.



ಸೋವಿಯಟ್ ಕ್ಷಿಪಣಿಕೇಂದ್ರದಲ್ಲಿ ಕರಾಹುಪ್ಪೆ

ವುಡ್‌ಲಾಂಡ್ 29—5—59 ನೇ
ಶುಕ್ರವಾರದಿಂದ
ಗೋಯಲ್ ಏನ್ ಕಾರ್ಪೊರೇರ್ಷನ್‌ರವರ
ನೈ ರಾಹೆ (ಹಿಂದಿ)
ತಾರಾಗಣ : ಅಶೋಕಕುಮಾರ್, ಗೀತಾಬಾಲಿ, ರಾಧಾಕಿಷನ್, ಶುಭ
[ದಿನವಹಿ 3 ಪ್ರದರ್ಶನಗಳು]

ಅಪೆರಾ— ತಾ. 24—5—59 ರಿ
ಶೊಲು ತಂಬಿ ಶೊಲು
ಕ್ರೇಂ ನಜೀರ್, ನಂಬಿಯಾರ್, ಸಾರಂಗಪಾಣಿ, ರಾಜ ಸುಲೋಚನ, ಮಧು
ಪಾರ್ಟು ಮಾಡಿರುವ ಚಿತ್ರಾಕರ್ಷ ತಮಿಳು ಚಿತ್ರ [ದಿನ

Edited, Printed & Published by Dharma Prachara Nirata M
Krishna Rao, at the Satyavadi Press Chamarajpuram, Mys